**CC No.2082/2023**
**PW - 1**

**ದಿನಾಂಕಃ 13.10.2025.**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸ್ ಎಸ್ ಕೆ ವಕೀಲರಿಂದಃ**

5. ವಿನಾಯಕ ಸಹಕಾರಿ ಸಂಘದ ಕಚೇರಿ ಯಾದಗಿರಿಯ ಬಾಲಾಜಿ ದೇವಸ್ಥಾನದ ಹತ್ತಿರ ಇದೆ. ಸದರಿ ಕಚೇರಿ ಬಾಡಿಗೆ ಕಟ್ಟಡದಲ್ಲಿ ಇರುತ್ತದೆ. ಶ್ರೀಹರಿ ಎಂಬಾತ ಸದರಿ ಕಟ್ಟಡದ ಮಾಲಿಕರಾಗಿರುತ್ತಾರೆ. ಮೊದಲು ಎರಡು ವರ್ಷದ ಅವದಿಗೆ ಬಾಡಿಗೆ ಕರಾರು ಮಾಡಿಕೊಳ್ಳಲಾಗಿತ್ತು. ಸದರಿ ಸಂಘ ಈಗ ಕಾರ್ಯ ನಿರ್ವಹಿಸುತ್ತಿದೆಯೋ ಇಲ್ಲವೋ ಎಂಬುದು ನನಗೆ ಮಾಹಿತಿ ಇಲ್ಲ. ಸದರಿ ಸಂಘದ ಈಗಿನ ಸಿಬ್ಬಂದಿಗಳ ಮಾಹಿತಿಯೂ ಸಹ ನನಗೆ ಇಲ್ಲ ಎಂದರೆ ಸರಿ. ಸಂಘ ಈಗ ಕಾರ್ಯ ನಿರ್ವಹಿಸುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ.

6. ನಾನು ನನ್ನ ಸ್ನೇಹಿತರ ಸಹಕಾರಿ ಸಂಘಗಳಿಂದ ಹಣ ಪಡೆದುಕೊಂಡು ಅದನ್ನು ಆರೋಪಿಗೆ ಸಾಲವಾಗಿ ನೀಡಿರುತ್ತೇನೆ. ಭಾರತ್ ಮಾತಾ ಸ್ವ ಸಹಕಾರಿ ಸಂಘ ಹಾಗೂ ಶ್ರೀ ವೈಷ್ಣವ ಸ್ವ ಸಹಾಯ ಸಂಘಗಳಿಂದ ಹಣ ಪಡೆದುಕೊಂಡಿದ್ದೆನು. ನಾನು ಭಾರತ್ ಮಾತಾ ಸ್ವ ಸಹಕಾರಿ ಸಂಘದಿಂದ ದಿನಾಂಕ 06.10.2022 ರಂದು ರೂ.4,50,000/- ಹಾಗೂ ಶ್ರೀ ವೈಷ್ಣವ ಸ್ವ ಸಹಾಯ ಸಂಘದಿಂದ ದಿಃ 10.10.2022 ರಂದು ರೂ.3,00,000/- ಸಾಲ ಪಡೆದುಕೊಂಡಿದ್ದೆನು. ನನ್ನ ಹತ್ತಿರ ಇದ್ದ ಉಳಿದ ಮೊತ್ತವನ್ನು ಸೇರಿಸಿ ಆರೋಪಿಗೆ ರೂ.9 ಲಕ್ಷ ಸಾಲ ನೀಡಿದ್ದೆನು. ಸದರಿ ಭಾರತ್ ಮಾತ ಹಾಗೂ ಶ್ರೀ ವೈಷ್ಣವ ಸ್ವ ಸಹಾಯ ಸಂಘಗಳು ನೊಂದಣಿ ಆಗಿರುವುದಿಲ್ಲ. ಸದರಿ ಸಂಘಗಳಿಂದ ನಾನು ಸಾಲ ಪಡೆದುಕೊಂಡಿರುವುದನ್ನು ತೋರಿಸಲು ಸಂಘದಲ್ಲಿ ದಾಖಲೆಗಳು ಇರುತ್ತವೆ. ಅವುಗಳನ್ನು ಪಡೆದುಕೊಂಡು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಸದರಿ ಸಂಘದವರು ನನಗೆ ಸಾಲದ ಹಣವನ್ನು ನಗದು ರೂಪದಲ್ಲಿ ನೀಡಿದ್ದರು. ಆರೋಪಿಗೆ ರೂ.500 ಮುಖ ಬೆಲೆಯ ನೋಟುಗಳನ್ನು ನೀಡಿದ್ದೆನು. ರೂ.20 ಸಾವಿರ ಮೇಲ್ಪಟ್ಟ ಮೊತ್ತದ ಹಣಕಾಸಿನ ವ್ಯವಹಾರನ್ನು ಬ್ಯಾಂಕ್ ಖಾತಾ ವರ್ಗಾವಣೆ ಅಥವಾ ಚೆಕ್ ಮೂಲಕವೇ ಮಾಡಬೇಕಾಗುತ್ತದೆ ಎಂಬುದು ನನಗೆ ಗೊತ್ತಿದೆ ಎಂದರೆ ಸರಿ. ನಾನು ಯಾದಗಿರಿಯ ಆಕ್ಸಿಸ್, ಕೆನರಾ ಹಾಗೂ ಎಸ್.ಬಿ.ಐ ಬ್ಯಾಂಕುಗಳಲ್ಲಿ ಖಾತೆ ಹೊಂದಿರುತ್ತೇನೆ. ನಾನು 2022 ಹಾಗೂ 2023 ರ ಸಾಲಿನಲ್ಲಿಯೂ ಸಹ ನನ್ನ ಆದಾಯ ಘೋಷಿಸಿಕೊಂಡು ಆದಾಯ ತೆರಿಗೆ ವರದಿ ಸಲ್ಲಿಸಿರುತ್ತೇನೆ. ಸದರಿ ಸಾಲಿನಲ್ಲಿ

ನಿಮ್ಮ ಆದಾಯ ಎಷ್ಟಿದೆ ಎಂದು ಘೋಷಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ರೂ.9 ಲಕ್ಷ ಸಾಲ ನೀಡಿರುವುದನ್ನು ನನ್ನ ಆದಾಯ ತೆರಿಗೆ ವರದಿಯಲ್ಲಿ ನಮೂದಿಸಿಲ್ಲ. ನನ್ನ ಆದಾಯ ತೆರಿಗೆ ವರದಿಯ ಪ್ರತಿಗಳನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

7. 2023 ಏಪ್ರಿಲ್ ತಿಂಗಳಲ್ಲಿ ಆರೋಪಿ ನಮ್ಮ ಮನೆಯಲ್ಲಿ ನನಗೆ ನಿಪಿ-1ರ ಚೆಕ್ಕನ್ನು ನಿಡೀದ್ದರು. ಆರೋಪಿ ನನಗೆ ಒಂದು ಚೆಕ್ಕನ್ನು ಮಾತ್ರ ನೀಡಿದ್ದಾರೆ. ಆರೋಪಿ ನಮ್ಮ ಮನೆಗೆ ಬರುವ ಪೂರ್ವದಲ್ಲಿಯೇ ಚೆಕ್ಕಿನಲ್ಲಿನ ವಿವರಗಳನ್ನು ನಮೂದಿಸಿ ಅದಕ್ಕೆ ತಮ್ಮ ಸಹಿ ಮಾಡಿಕೊಂಡು ಬಂದಿದ್ದರು. ನಾನು ಹಾಗೂ ಆರೋಪಿ ಹಲವಾರು ವರ್ಷಗಳಿಂದ ಒಡನಾಟ ಹಾಗೂ ವ್ಯವಹಾರ ಹೊಂದಿರುವುದರಿಂದ ಮತ್ತು ಒಂದೇ ಸಂಸ್ಥೆಯಲ್ಲಿ ಸದಸ್ಯರಾಗಿದ್ದರಿಂದ ನನಗೆ ಆರೋಪಿ ಯಾವ ರೀತಿ ಸಹಿ ಮಾಡುತ್ತಾರೆ ಎಂಬುದು ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-1ಎ ರಲ್ಲಿನ ಸಹಿಯನ್ನು ತೋರಿಸಿ ಆರೋಪಿ 2018 ರಿಂದ 2022ರ ಅವದಿಯಲ್ಲಿ ಇದೇ ರೀತಿ ಸಹಿ ಮಾಡುತ್ತಿದ್ದರೇ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ, ಆದರೆ 2023 ರಲ್ಲಿ ಅವರು ನಿಪಿ-1ಎ ರಂತೆ ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

8. ಚೆಕ್ ಅಮಾನ್ಯಗೊಂಡ ನಂತರ ಆರೋಪಿಗೆ ಫೋನ್ ಕರೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಮಾಡಿದ್ದೆನು ಎಂದು ನುಡಿಯುತ್ತಾರೆ. ಒಂದು ಸಲ ಮಾತ್ರ ಕರೆ ಮಾಡಿದ್ದೆನು. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಚೆಕ್ ಮರಳಿ ಬಂದಿರುತ್ತದೆ ಎಂದು ಆರೋಪಿಗೆ ತಿಳಿಸಿದ್ದೆನು. ಆರೋಪಿಯೂ ಸಹ ನನಗೆ ಕರೆ ಮಾಡಿ ದೂರು ದಾಖಲು ಮಾಡದಂತೆ ಕೇಳಿಕೊಂಡಿದ್ದರು. ಸದರಿ ಪರಸ್ಪರ ಕರೆ ಮಾಡಿರುವುದನ್ನು ತೋರಿಸಲು ನನ್ನ ಹತ್ತಿರ ದಾಖಲೆಗಳು ಇಲ್ಲ. ವಕೀಲರ ಮೂಲಕ ನೋಟಿಸ್ ಕಳುಹಿಸಿದ ನಂತರ ಆರೋಪಿ ನನಗೆ ಮೇಲೆ ಹೇಳಿದಂತೆ ಕರೆ ಮಾಡಿದ್ದರು. ಆರೋಪಿ ನನಗೆ 2023ರ ಏಪ್ರಿಲ್ ತಿಂಗಳಿನಲ್ಲಿ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ದಿಃ 14.01.2014 ರಂದು ನಿಪಿ-1ರ ಚೆಕ್ಕನ್ನು ನಿಡೀದ್ದರು ಎಂದರೆ ಸರಿಯಲ್ಲ. ಆರೋಪಿ ಜನವರಿ ಮತ್ತು ಪೆಬ್ರವರಿ 2014 ರಲ್ಲಿ ನನಗೆ ನಿಪಿ-1ರ ಚೆಕ್ಕನ್ನು ಮಾತ್ರವಲ್ಲದೇ ತನ್ನ ಖಾತೆಯ 115406 ಹಾಗೂ 115407 ಸಂಖ್ಯೆಯ ಚೆಕ್ಕುಗಳನ್ನು ಸಹ ನೀಡಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಆರೋಪಿ ಜಂಟಿಯಾಗಿ ಹಣ ಹೂಡಿಗೆ ಮಾಡಲು ಉದ್ದೇಶಿಸಿದ್ದರಿಂದ ಆತನಿಂದ ನಿಪಿ-1ರ ಚೆಕ್ಕನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ನಾನು ಆಶಿಶ್ ರೈ ಎಂಬುವವರಿಗೆ ಬೇರೆಯವರಿಂದ ಸಾಲ ಕೊಡಿಸಿ ಅದರ ಭದ್ರತೆಗಾಗಿ ಆರೋಪಿಯ ಸದರಿ ಎರಡು ಚೆಕ್ಕುಗಳನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. 2017 ರಲ್ಲಿ ಸ್ಟಟ್ ಬ್ಯಾಂಕ್ ಆಫ್ ಹೈದ್ರಾಬಾದ್

ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕುಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನೊಂದಿಗೆ ವಿಲೀನ ಗೊಂಡಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬ್ಯಾಂಕ್ ವಿಲೀನಗೊಂಡಿರುವುದು ನಿಮಗೆ ಗೊತ್ತಿದೆ ಎಂದರೆ ಸಾಕ್ಷಿಯು ಸರಿ ಆದರೆ ಯಾವಾಗ ವಿಲೀನಗೊಂಡಿದೆ ಎಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1ರ ಚೆಕ್ಕನ್ನು ಪಡೆದುಕೊಂಡ ನಂತರ 2018ರ ವರೆಗೆ ನಾನು ಯಾವುದೇ ಹೂಡಿಕೆ ಮಾಡಿಲ್ಲ ಹಾಗೂ ಆರೋಪಿಯ ಸ್ನೇಹಿತ  ಸಾಲ ಮರುಪಾವತಿ ಮಾಡಿದರೂ ಸಹ ಆರೋಪಿಯ ಉಳಿದ ಎರಡು ಚೆಕ್ಕುಗಳನ್ನು ನಾನು ಆತನಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2017ರಲ್ಲಿ ಬ್ಯಾಂಕುಗಳು ವಿಲಿನಗೊಂಡ ನಂತರ ಆರೋಪಿಯ SBI ಖಾತೆಯ ಚೆಕ್ಕುಗಳು ಬಳಕೆಯಲ್ಲಿ ಇರಲಿಲ್ಲ ಆದ್ದರಿಂದ ಆತ ನನ್ನಿಂದ ನಿಪಿ-1ರ ಚೆಕ್ಕನ್ನು ಮರಳಿ ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಂತರ ನೀವು ಸದರಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಆರೋಪಿ ನನಗೆ ಏಪ್ರಿಲ್ 2023 ರಲ್ಲಿ ನಿಪಿ-1ರ ಚೆಕ್ಕನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಆರೋಪಿ 2014 ರಿಂದ 2017 ವರೆಗೆ ಮಾತ್ರ ನಿಪಿ-1ಎ ರಲ್ಲಿ ಇರುವಂತೆ ಸಹಿ ಮಾಡುತ್ತಿದ್ದರು ಆದರೆ 2023 ರಲ್ಲಿ ಆ ರೀತಿ ಸಹಿ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಯಾವ ವರ್ಷದಲ್ಲಿ ಯಾವ ರೀತಿ ಸಹಿ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 2017 ರಿಂದ 2023ರ ಅವದಿಯ ಆರೋಪಿಯ ಎಲ್ಲಾ ಬ್ಯಾಂಕ್ ವ್ಯವಹಾರದ ದಾಖಲೆಗಳಲ್ಲಿ ಹಾಗೂ ಇತರ ದಾಖಲೆಗಳಲ್ಲಿಯೂ ಸಹ ಆತನ ಬದಲಾದ ಸಹಿ ಇರುತ್ತದೆ ಹೊರತು ನಿಪಿ-1ಎ ರಲ್ಲಿ ಇರುವ ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1ರ Sl. No.ಚೆಕ್ಕುಗಳು 2014 ರಿಂದ 2017 ವರೆಗೆ ಮಾತ್ರ ಚಲಾವಣೆಯಲ್ಲಿ ಇದ್ದವು ಹಾಗೂ ಆ ನಂತರ ಆರೋಪಿಯ ಹತ್ತಿರ ಬೇರೆ Sl. No. ನಲ್ಲಿನ ಚೆಕ್ಕುಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ರೂ.500/- ಖರ್ಚಿನ ಮೇರೆಗೆ ಸಮಯ ನೀಡಿ ಮುಂದೂಡಲಾಗಿದೆ.)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ